'ಏ ತಾಜ್, ನಾನು ಕಣೆ ಮಯೂರಿ. ನೀನು ಮಾತಾಡೋದು ಸರಿಯಾಗಿ ಕೇಳಿಸ್ತಾ ಇಲ್ಲ. ರಿಸೆಪ್ಷನ್ ಸರಿಯಿಲ್ಲ ಕಣೆ. ಗಟ್ಟಿಯಾಗಿ ಮಾತಾಡು. ಡೆಲ್ಲಿಯಿಂದ ಮಾತಾಡ್ತಾ ಇದ್ದೀನಿ... ಕರ್ನಾಟಕ ಎಕ್ಸ್‌ಪ್ರೆಸ್‌ನಲ್ಲಿ ಬೆಂಗಳೂರಿಗೆ ಬರ್ತಾ ಇದ್ದೀನಿ...' ಹೀಗೆ ನಮ್ಮಿಬ್ಬರ ಸೆಲ್ ಫೋನ್ ಸಂಭಾಷಣೆ ಮುಂದುವರೆಯುತ್ತೆ. ಕೊನೆಯಲ್ಲಿ ಅವಳು 'ರಾವೇ ಮಾವೂರಿಕಿ ಏ, ಮಯಮ್ಮ..' ಅಂತ ಕೊಂಟಿತನದಲ್ಲಿ ತೆಲುಗಿನಲ್ಲಿ ತನ್ನೂರಿಗೆ ಕರೆಯುತ್ತಾಳೆ. ನಾನೂ ಕೂಡ ತೆಲುಗಿನಲ್ಲೇ 'ವಸ್ತಾನು..' ಎಂದು ಬರುವುದಾಗಿ ನಗುತ್ತಾ ಉತ್ತರ ಕೊಡುತ್ತೇನೆ. ನನ್ನ ನಗುವಿಗೂ ಒಂದು ಕಾರಣವಿದೆ. ನಾನು ಕನ್ನಡ ನಾಡಿನ ಬಯಲು ಸೀಮೆಯ ತೆಲುಗುಪಿಲ್ಲ. ಅವಳೋ ಕನ್ನಡ ನಾಡಿನ ಪಶ್ಚಿಮ ಘಟ್ಟಗಳ ಕನ್ನಡದ ಕುವರಿ. ಅವಳಿಗೆ ತೆಲುಗು ಬರುವುದಿಲ್ಲ!

ತಾಜುನ್ನಿಸಾ ಶಿವಮೊಗ್ಗದವಳು. ಒಳ್ಳೆಯವಳು. ಅವಳ ಅಪ್ಪ ಅಮ್ಮ ಹೈಸ್ಕೂಲ್ ಟೀಚರ್ಸ್. ನನಗೆ ಅವಳ ಪರಿಚಯ ಆದದ್ದು, ಬೆಂಗಳೂರಿನಲ್ಲಿ, ಹೆಬ್ಬಾಳ ವೆಟರ್ನರಿ ಕಾಲೇಜಿನಲ್ಲಿ. ಮೊದಲ ದಿನವೇ. ಓರಿಯೆಂಟೇಷನ್ ಪ್ರೋಗ್ರಾಮ್ ನಲ್ಲಿ. ನಾವಿಬ್ಬರೂ ಕ್ಲಾಸ್ ಮೇಟ್ಸ್. ಬೆಂಚ್ ಮೇಟ್ಸ್. ಹಾಸ್ಟೆಲ್ ಮೇಟ್ಸ್. ರೂಮ್ ನಂಬರ್ 45ರಲ್ಲಿ ಒಟ್ಟಿಗೆ ಐದು ವರ್ಷ ಕಳೆದವರು. ನಾವಿಬ್ಬರೂ ಆತ್ಮೀಯ ಗೆಳತಿಯರು. ನಾನು ಪ್ರತಿ ದಿನ ಮೌನವಾಗಿ ಕುಳಿತು ದೇವರನ್ನು, ಅಮ್ಮ ಅಪ್ಪನನ್ನು, ಅಮ್ಮಣ್ಣಿ ಸ್ವಾಮಿಯೋರನ್ನೂ ನೆನೆಯುತ್ತೇನೆ. ಅಮ್ಮಣ್ಣಿಯಿಂದ ಕಲಿತ ಶ್ಲೋಕಗಳನ್ನು ಸಮಯ ಸಿಕ್ಕಿದಾಗಲೆಲ್ಲ ಹೇಳಿಕೊಳ್ಳುತ್ತೇನೆ. ಪ್ರತಿ ಶನಿವಾರ ಗಂಗೇನಹಳ್ಳಿಯ ಆಂಜನೇಯನ ಗುಡಿಗೆ ಹೋಗಿ ಬರುತ್ತೇನೆ. ಅವಳು ಪ್ರತಿ ದಿನ ನಮಾಜ್ ಮಾಡುತ್ತಾಳೆ. ರಂಜಾನ್ ಉಪವಾಸ ಮಾಡುತ್ತಾಳೆ.

ಅವಳು ಬಹಳ ಬುದ್ಧಿವಂತೆ. ಫಸ್ಟ್ ರ್‍ಯಾಂಕ್. ಇಂಗ್ಲಿಷ್ ಚೆನ್ನಾಗಿ ಬರುತ್ತದೆ. ಒಳ್ಳೆಯ ಭಾಷಣಕಾರಿ. ಅವಳು ಈಗ ಶಿವಮೊಗ್ಗದಲ್ಲಿಯೇ ವೆಟರಿನರಿ ಕಾಲೇಜಿನಲ್ಲಿ ಮೈಕ್ರೋಬಯಾಲಜಿ ಸಬ್ಜೆಕ್ಟ್ ನಲ್ಲಿ ಎಂ.ವಿ .ಎಸ್ಸಿ ಮಾಡುತ್ತಿದ್ದಾಳೆ. ತಾನಾದರೋ ಉತ್ತರ ಪ್ರದೇಶದ ಇಜತ್ ನಗರದಲ್ಲಿರುವ ಇಂಡಿಯನ್ ವೆಟರ್ನರಿ ರಿಸರ್ಚ್ ಇನ್‌ಸ್ಟಿಟ್ಯೂಟ್ (ಐವಿಆರ್‌ಐ) ನಲ್ಲಿ ವೆಟರ್ನರಿ ಪಬ್ಲಿಕ್ ಹೆಲ್ತ್ ಸಬ್ಜೆಕ್ಟ್ ನಲ್ಲಿ ಎಂ.ವಿ.ಎಸ್ಸಿ ಮಾಡಲು ಬಂದಿದ್ದೇನೆ. ಬಂದು ಎರಡು ವರ್ಷ ಆಯ್ತು. ಬಂದಾಗಿನಿಂದ ಹಳ್ಳಿಗೇ ಹೋಗಿಲ್ಲ. ಓದು, ಸಂಶೋಧನೆ, ಥೀಸಿಸ್ ಕೆಲಸ ಎಲ್ಲಾ ಮುಗಿಸಿ ಎಂ .ವಿ .ಎಸ್ಸಿ ಸ್ನಾತಕೋತ್ತರ ಪದವಿಯೊಂದಿಗೆ ಹಳ್ಳಿಗೆ ಮರಳುತ್ತಿದ್ದೇನೆ. ಈಗ ಆರಾಮ. ಆತಂಕ ಇಲ್ಲ. ಓದು, ಸಂಶೋಧನೆಯಲ್ಲಿ ಮುಳುಗಿ ಮನೆ, ಹಳ್ಳಿ ಎಲ್ಲಾ ಮರೆತಿದ್ದೆ. ಈಗ ನೆನಪಾಗುತ್ತದೆ. ಹಳ್ಳಿ ಬದುಕು ಮೆಲುಕು ಹಾಕುತ್ತೇನೆ. ಮರಳಿ ಮರಳಿ ಮೆಲುಕು ಹಾಕುತ್ತೇನೆ. ಹಸುಗಳು ಮೆಲುಕು ಹಾಕುವಂತೆ! ಹೌದು, ತಾನು ಹಸು ಡಾಕ್ಟರ್ ಅಲ್ಲವೇ! ಎಲ್ಲಿ ಹೋಗುತ್ತೆ ಆ ವೆಟರ್ನರಿ ಬುದ್ಧಿ!

ಅಪ್ಪ ಅಮ್ಮ ಜ್ಞಾಪಕಕ್ಕೆ ಬರುತ್ತಾರೆ. ಅಪ್ಪ ತೋಟಿ ಚಿನ್ನ ಫಕೀರಪ್ಪ. ಅಮ್ಮ ಗಂಗುಲಮ್ಮ. ಹೆಬ್ಬೆಟ್ಟಿನವರು. ಗುಡಿಸಿಲು ಮನೆ. ಇಪ್ಪತ್ತು ಕುಂಟೆ ಹೊಲ ಇದೆ. ಮಂದೆ ಕೆಲಸ. ಊರೆಲ್ಲರ ದನ ಕಾಯುವ ಕೆಲಸ. ಊರವರ ಹಸು ಕಡಸು ಕರು ಎಲ್ಲಾ ಎಂಟು ಗಂಟೆಗೇ ಮಂದೆಗೆ ಬರುತ್ತವೆ. ಈ ದನಗಳಿಗೆಲ್ಲಾ ಮಂದೆ ಸ್ಕೂಲ್ ಇದ್ದ ಹಾಗೆ! ಹಸುಗಳೆಲ್ಲಾ ಅರ್ಧ, ಒಂದು ಲೀಟರು ಹಾಲು ಕೊಡುವ ಹಳ್ಳಿಕಾರ ಹಸುಗಳೇ. ಅವುಗಳನ್ನು ಅವರವರ ಮನೆಯವರೇ ಮಂದೆಗೆ ಅಟ್ಟಿಕೊಂಡು ಬರುತ್ತಾರೆ. ಮಂದೆ ಊರಿಗೆ ಒಂದು ಕಿಲೋ ಮೀಟರು ದೂರದಲ್ಲಿದೆ. ಮಂದೆಗೆ ಬರುವಾಗ ಗಲಾಟೆ ಮಾಡುತ್ತವೆ. ಜಗ್ಗಾಡುತ್ತವೆ. ಸಂಜೆ ಮಂದೆಯಿಂದ ಮನೆಗಳಿಗೆ ವಾಪಸು ಬರುವಾಗ ಖುಷಿಯಿಂದ ಓಡಿ ಬರುತ್ತವೆ! ಮಂದೆ ದೊಡ್ಡಿಗೆ ಸುತ್ತಲೂ ಬೇಲಿ ಹಾಕಿದೆ. ಒಳಗೆ ನೀರಿನ ತೊಟ್ಟಿ ಇದೆ. ತಿಪ್ಪೆ ಇದೆ. ಹೊಂಗೆ ಮರಗಳಿವೆ. ಪಕ್ಕದಲ್ಲೇ ನೀರಿನ ಕುಂಟೆ ಇದೆ. ಹೊಂಗೆ ಮರಕ್ಕೆ ಅಮ್ಮ ಊಟದ ಬುತ್ತಿ ಜೋತು ಹಾಕುತ್ತಾಳೆ. ದನಗಳು ಹತ್ತು ಗಂಟೆಯವರೆಗೂ ಅಲ್ಲಿಯೇ ಇರುತ್ತವೆ. ತನ್ನ ಬಾಲ್ಯದ ದಿನಗಳನ್ನೆಲ್ಲ ಮಂದೆಯಲ್ಲೇ ಕಳೆದಿದ್ದೇನೆ. ಹತ್ತು ಗಂಟೆ ಮೇಲೆ ಅಮ್ಮ ಅಪ್ಪ ತಾನು ದನಗಳನ್ನು ಅಟ್ಟಿಸಿಕೊಂಡು ಮೇಯಿಸಲು ಗೋಮಾಳ, ಪರಂಬೋಕೆ ಜಮೀನು, ಅಡವಿಗಳ ಅಕ್ಕ ಪಕ್ಕ, ಬೆಟ್ಟದ ಬುಡ, ಉದ್ದಕ್ಕೂ ಸಣ್ಣಗೆ ನೀರು ಹರಿಯುವ ಏಟಿ, ಕಾಲುವೆ ಕಾನ ಕಡೆ ಹೋಗುತ್ತೇವೆ. ಐದು ಗಂಟೆಗೆ ಮಂದೆಗೆ ವಾಪಸು ಬರುತ್ತೇವೆ. ಆರು ಗಂಟೆಗೆ ಅವುಗಳನ್ನು ಮಂದೆಯಿಂದ ಬಿಡುತ್ತಾರೆ. ಆಗ ಅವುಗಳು ತಮ್ಮಿಷ್ಟಕ್ಕೆ ತಾವೇ ತಮ್ಮ ತಮ್ಮ ಮನೆಗಳಿಗೆ ಓಡಿ ಬರುತ್ತವೆ, ಖುಷಿಯಿಂದ! ಮಂದೆಯಿಂದ ಅವುಗಳನ್ನು ಕರೆತರಲು ಯಾರೂ ಬರುವುದಿಲ್ಲ.

ತೀರಾ ಸಣ್ಣವಳಿದ್ದಾಗ, ಲಂಗದ ಒಳಗೆ ಚಡ್ಡಿಯೂ ಹಾಕದ ವಯಸ್ಸು, ತಾನೂ ದನಗಳ ಜೊತೆಯಲ್ಲೇ ಕಳೆಯುತ್ತೇನೆ. ಹಸುಗಳಿಗೆ ಜ್ವರ ಬಂದರೆ ಅಳುತ್ತೇನೆ. ಹಸುಗಳಲ್ಲಿ ಹಾಲು ಕರೆಯುವುದು ಅಂದರೆ ತನಗೆ ಬಹಳ ಇಷ್ಟ. ಮಂದೆ ಹಸುಗಳ ಕೆಚ್ಚಲಿನಿಂದ ನೇರವಾಗಿ ಹಾಲು ಕುಡಿಯುತ್ತೇನೆ. ಮಳೆಗಾಲದಲ್ಲಿ ನೆನೆಯುತ್ತಾ ಮಂದೆಯಲ್ಲೇ ನಿಲ್ಲುವ ತಾನು ಎದುರುಗಡೆಯ ಬೆಟ್ಟದಿಂದ ಕೆಳಕ್ಕೆ ಹಾಲಿನ ಹೊಳೆಯಂತೆ ಹರಿಯುವ ನೀರನ್ನು ನೋಡುತ್ತಾ ಆಗಲೇ ಹಗಲು ಕನಸು ಕಾಣುತ್ತೇನೆ. ಮುಂದೊಂದು ದಿನ ಹಾಲೂ ಕೂಡಾ ಹೊಳೆಯಾಗಿ ಹರಿದರೆ? ತುಂಡು ಲಂಗದ ತುಂಟ ಹುಡುಗಿ ತಾನು ಆಗ! ತನಗೆ ಆರು ವರ್ಷ ತುಂಬಿದಾಗ ಸ್ವಾಮಿಯೋರೇ ತನ್ನನ್ನು ಶಾಲೆಗೆ ಸೇರಿಸದ್ದು. ಸ್ವಾಮಿಯೋರಿಗೆ ಹೆಣ್ಣುಮಕ್ಕಳಿಲ್ಲ. ಶಂಕರಪ್ಪ ಸ್ವಾಮಿ ಒಬ್ಬರೇ ಗಂಡು ಮಗ. ತನಗಿಂತ ನಾಲ್ಕು ವರ್ಷ ಚಿಕ್ಕವರು. ಸ್ವಾಮಿಯೋರ ಮನೆಯವರಿಗೂ ಜನ್ಮ ಜನ್ಮದ ಅನುಬಂಧ. ಹಿಂದಿನಿಂದಲೂ ನಾವು ಸ್ವಾಮಿಯೋರ ಮನೆಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೀವಿ. ಈ ಸ್ವಾಮಿಯೋರ ತಾತ ಶಾನುಭೋಗರು. ನನ್ನ ತಾತ ತಲೆ ಮೇಲೆ ಕಡತ ಹೊತ್ತುಕೊಂಡು ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಅವರ ಜೊತೆ ತಾಲ್ಲೂಕು ಕಚೇರಿಗೆ ಜಮಾಬಂದಿಗೆ ನಡೆದು ಹೋಗುತ್ತಿದ್ದರಂತೆ. ಇಪ್ಪತ್ತು ಕಿಲೋ ಮೀಟರು ದೂರ. ನಾವು ಅವರ ಮನೆ ಮುಂದೆ ಕಸ ಗುಡಿಸುವುದು, ದನದ ಕೊಟ್ಟಿಗೆ ಗುಡಿಸುವುದು ಮಾಡುತ್ತೇವೆ. ಹೊರಗಿನ ಕೆಲಸ ಮಾಡುತ್ತೇವೆ. ಅವರ ಹಳ್ಳಿಕಾರ ಹಸುಗಳನ್ನು ನನ್ನ ಅಮ್ಮಾನೋ, ಇಲ್ಲಾ ನಾನೋ ಮಂದೆಗೆ ಹೊಡೆದುಕೊಂಡು ಹೋಗುತ್ತೇವೆ. ಅಮ್ಮಣ್ಣಿ ಹೇಳಿದ್ದಾರೆ ಬೆಳಿಗ್ಗೆ ಎದ್ದ ತಕ್ಷಣ ಹಸು ಮುಖ, ಬಾಲ ನೋಡಬೇಕು. ಮುಟ್ಟಿ ಕಣ್ಣಿಗೆ ಒತ್ತಿಕೊಳ್ಳಬೇಕು ಅಂತ. ಪ್ರತಿ ದಿನ ತಾನು ಹಾಗೆಯೇ ಮಾಡುತ್ತೇನೆ. ಅಮ್ಮಣ್ಣಿ ಬೆಳಗ್ಗೆ ಆರು ಗಂಟೆಗೇ ಸ್ನಾನ ಮಾಡಿ ಎರಡು ಹಳ್ಳಿಕಾರ ಹಸುಗಳಿಗೂ ಅರಿಸಿನ ಕುಂಕುಮ ಹಚ್ಚಿ ಪೂಜೆ ಮಾಡಿ ನಮಸ್ಕಾರ ಮಾಡುತ್ತಾರೆ. ತಾನು ನಿಂತು ನೋಡುತ್ತಾ ಇರುತ್ತೇನೆ. ತಾನೂ ಅವುಗಳನ್ನು ಮುಟ್ಟಿ ನಮಸ್ಕಾರ ಮಾಡುತ್ತೇನೆ. ಪ್ರದಕ್ಷಿಣೆ ಮಾಡುತ್ತೇನೆ. ನಂತರ ಅಮ್ಮಣ್ಣಿ ಹಸುಗಳ ಮುಂದೆ ಕುಡಿಯಲು ಕಲಗಚ್ಚು ಇಟ್ಟು ಶ್ಲೋಕ ಹೇಳುತ್ತಾ ಹಾಲು ಕರೆಯುತ್ತಾರೆ. ನಂತರ ತಾನು ಆ ಹಸುಗಳನ್ನು ಅಟ್ಟಿಕೊಂಡು ಮಂದೆಗೆ ಹೋಗುತ್ತೇನೆ.

ನಾವು ನಮ್ಮ ಮನೆಯಲ್ಲಿ ಅಡುಗೆ ಮಾಡುವುದಿಲ್ಲ. ಸ್ವಾಮಿ ಮನೆಯವರೇ ನಮಗೆ ಮೂರು ಹೊತ್ತೂ ಊಟ ಕೊಟ್ಟು ಬಿಡುತ್ತಾರೆ. ನಮ್ಮ ಜನ ಎಲ್ಲಾ ಮಾಂಸ ತಿನ್ನುತ್ತಾರೆ. ಆದರೆ ನಾವು ಮಾತ್ರ ಮಾಂಸ ತಿನ್ನುವುದಿಲ್ಲ. ಸ್ವಾಮಿಯೋರ ಮನೆಯ, ಅಮ್ಮಣ್ಣಿ ಕೈಯ ಊಟ ತಿಂದು ತಿಂದು ನಾವೂ ಶಾಖಾಹಾರಿಗಳಾಗಿ ಬಿಟ್ಟಿದ್ದೇವೆ! ನನಗೆ ಅಮ್ಮಣ್ಣಿಯ ಹಬ್ಬದ ಅಡುಗೆ ಊಟ ಬಹಳ ಇಷ್ಟ. ಅದಕ್ಕಿಂತಲೂ ಅವರ ಮನೆ ತಿಥಿ ಊಟ ಮತ್ತೂ ಇಷ್ಟ! ಎಂಥಾ ರುಚಿ! ಎಷ್ಟೊಂದು ಬಗೆಯ ತಿಂಡಿಗಳು! ವರ್ಷದಲ್ಲಿ ಆರು ತಿಥಿ ಮಾಡುತ್ತಾರೆ. 'ದಿನಾ ತಿಥಿ ಮಾಡಿ ಅಮ್ಮಣ್ಣಿ, ನಿಮ್ಮ ತಿಥಿ ಯಾವಾಗ ಮಾಡ್ತೀರಿ ಅಮ್ಮಣ್ಣಿ, ನಿಮ್ಮ ತಿಥಿ ಅಡುಗೆ ನೀವೇ ಮಾಡಿ ನನಗೆ ಹಾಕಬೇಕು ಅಂತ ಕೇಳಿ ಅಮ್ಮನಿಂದ ಹೊಡೆತ ತಿಂದಿದ್ದೂ ಉಂಟು!' ಆಗ ಅಮ್ಮಣ್ಣಿ ನಗುತ್ತ ಹೋಗಲಿ ಬಿಡೆ ಗಂಗಿ. ಮಗು ಅದು. ಅದಕ್ಕೇನು ಗೊತ್ತು' ಅಂತ ಹೇಳುತ್ತಾರೆ. ತಿಥಿ ಅಂದರೆ ಏನು ಅಂತ ಇನ್ನೂ ಅರಿಯದ ವಯಸ್ಸು ತನ್ನದು. ಅಮ್ಮಣ್ಣಿ ಹೇಳುತ್ತಿದ್ದ ಲಲಿತ ಸಹಸ್ರನಾಮ, ವಿಷ್ಣು ಸಹಸ್ರನಾಮ, ಶ್ರೀ ಆದಿ ಶಂಕರಾಚಾರ್ಯರ ಮಹಿಷಾಸುರ ಮರ್ದಿನಿ ಶ್ಲೋಕ 'ಐಗಿರಿ ನಂದಿನಿ...' ಶ್ಲೋಕ ಕೇಳಿಸಿಕೊಂಡು ಕಲಿತುಕೊಳ್ಳುತ್ತೇನೆ. ನನ್ನ ಆಸಕ್ತಿ ನೋಡಿ, ನಾನು ಅವರು ಹೇಳುತ್ತಿದ್ದುದನ್ನೇ ಗೊಣಗು ಟ್ಟುದ್ದಿದ್ದುದನ್ನೇ ನೋಡಿ ಅಮ್ಮಣ್ಣಿ ನನಗೆ